

ಗಾಡಿ ಬೇಕು, ಪಗಡೆ ಬೇಕು – ಹೀಗೆ ಏನು ಕೇಳಿದರೂ ನಾವು ಮಾಡಿಕೊಡುತ್ತೇವೆ. ಪುರೋಹಿತರೊಂದನ್ನು ಬಿಟ್ಟು ಬೇರೆಲ್ಲ ವ್ಯವಸ್ಥೆಯನ್ನು ನಾವೇ ಮಾಡಿಕೊಡುತ್ತೇವೆ. ಸಂಗೀತ, ನೃತ್ಯ, ಡಿಜೆ ವ್ಯವಸ್ಥೆ ಕೂಡ ಇದೆ. ಉತ್ತರ ಭಾರತ, ದಕ್ಷಿಣ ಭಾರತ, ಇಟಾಲಿಯನ್, ಚೈನೀಸ್, ಮೆಕ್ಸಿಕನ್, ಬೇಲ್‌ಪುರಿ, ಸೇವ್‌ಪುರಿ ಯಾವುದೇ ಶೈಲಿಯ ಊಟ, ಏನೇ ಐಟಂ ಕೇಳಿದ್ರೂ ನಮ್ಮದೇ ಶೆಫ್‌ಗಳಿದ್ದಾರೆ. ಭಾರತದಲ್ಲಿ ಊಟ ಚೆನ್ನಾಗಿದ್ದರೆ ಮದುವೆ ಚೆನ್ನಾಗಿ ಆಯ್ತು ಎಂದರ್ಥ ಅಲ್ಲವೇ?' ಎಂದು ನಗುತ್ತಾರೆ ಪ್ಯಾಲೇಸ್ ಗ್ರೌಂಡ್‌ನಲ್ಲಿರುವ ಗಾಯತ್ರಿ ವಿಹಾರ ಸಾಗರ್ ಮಾಲೀಕರಾದ ಪಂಕಜ್ ಕೊಠಾರಿ.



ಪಂಕಜ್ ಕೊಠಾರಿ

## ಅಲಂಕಾರ

ಮದುವೆ ಅಂದಮೇಲೆ ಅಲ್ಲಿಯ ವಾತಾವರಣದಲ್ಲಿ ಅದ್ದೂರಿತನ ಎದ್ದು ಕಾಣಲೇಬೇಕು. ಒಂದಿಷ್ಟು ಹಾರಗಳ ಅಲಂಕಾರ, ಬೆಳಕಿನ ಕಣ್ಣಾಮುಚ್ಚಾಲೆ, ಬಣ್ಣ ಬಣ್ಣದ ಹೂವಿನ ತೇರು, ಪ್ರವೇಶದ್ವಾರದಲ್ಲೇ ಮುದ ನೀಡಬಲ್ಲ ಸುಂದರ ಮೂರ್ತಿ, ಸ್ವಾಗತಕ್ಕೆ ಒಂದಿಷ್ಟು ಹೂವು, ಪನ್ನೀರು... ಒಂದೇ ಎರಡೇ. ಮದುವೆ ಮನೆ ಸಜ್ಜಾಗುವುದಕ್ಕೆ ಅಲಂಕಾರದ ಸೋಪಾನವಿರಲೇಬೇಕು.

ಇತ್ತೀಚೆಗೆ ಮದುವೆ ಮನೆಗಳಲ್ಲಿ ಕಲರ್ ಥೀಮ್ ಹೆಚ್ಚು ಜನಪ್ರಿಯತೆ ಗಳಿಸಿದೆ. ಸ್ಟೇಜ್ ವಿನ್ಯಾಸ, ಅಲ್ಲಿ ಬಳಸಲಾಗುವ ಬಣ್ಣಗಳ ಮೇಲೆಯೇ ಹುಡುಗ ಹುಡುಗಿಯ ದಿರಿಸಿನ ಬಣ್ಣಗಳೂ ನಿರ್ಧಾರವಾಗುವುದಿದೆ. ನೆರೆದವರ ಕಣ್ಣಿಗೆ ಆಕರ್ಷಣೆ ನೀಡಬಲ್ಲ ಹಾಗೂ ಕ್ಯಾಮೆರಾ ಕಣ್ಣಿಗೆ ಆಪ್ಯಾಯಮಾನವಾಗಬಲ್ಲ ಬಣ್ಣಗಳನ್ನು ಕಲರ್ ಥೀಮ್ ಹೆಸರಲ್ಲಿ ಆಯ್ಕೆ ಮಾಡಲಾಗುತ್ತದೆ.

ಈ ಅಲಂಕಾರಗಳಿಗೆ ಮೂಲವಸ್ತುವೇ ಹೂವುಗಳು. ವಿವಿಧ ಬಗೆಯ, ವರ್ಣಮಯ ಹೂವುಗಳನ್ನು ಬಳಸಿಕೊಂಡು ವೇದಿಕೆಗಳಲ್ಲಿ ಅಲಂಕಾರ ಮಾಡಲಾಗುತ್ತದೆ. ಕೆಲವೊಮ್ಮೆ ಬಣ್ಣಬಣ್ಣದ ಲೈಟ್‌ಗಳನ್ನು ಬಳಸಲಾಗುತ್ತದೆ. ವಿದೇಶದಿಂದ ವಿಭಿನ್ನ ಹೂವುಗಳನ್ನು ತರಿಸಿ ಅಲಂಕಾರಕ್ಕೆ ಬಳಸಿಕೊಳ್ಳುವ ಪರಿಪಾಠ ಕೂಡ ಹೆಚ್ಚಾಗಿದೆ. ಇದಕ್ಕೆ ಸಹಜವಾಗಿಯೇ ಬೆಲೆ ಜಾಸ್ತಿ.

ಬೆಂಗಳೂರಿನ ರಾಜಾಜಿನಗರದಲ್ಲಿ ದಶಕಗಳಿಂದ ಕೆಲಸ ಮಾಡುತ್ತಿರುವ 'ರಾಘವೇಂದ್ರ ಮ್ಯಾರೇಜ್ ಡೆಕೊರೇಟರ್ಸ್'ನ ಗಂಗಾಧರ್ ಅವರ ಅನುಭವದ ನುಡಿ ಹೀಗಿದೆ: 'ಈಗ ಇಂಟರ್‌ನೆಟ್ ಯುಗ. ತಮ್ಮ ತಮ್ಮ ಮದುವೆಗೆ ಅಲಂಕಾರ ಹೇಗಿರಬೇಕು ಎಂದು ಮೊದಲೇ ನಿರ್ಧರಿಸಿಕೊಂಡು ಬರುತ್ತಾರೆ. ಎಲ್ಲೋ ಮಾಡಿದ ಅದ್ದೂರಿ ಚಿತ್ರ ತಂದು ಡೆಕೊರೇಶನ್ ಹೀಗೇ ಇರಬೇಕು

### ಆಮಂತ್ರಣ ಪತ್ರಿಕೆ

ಲಕ್ಷಾಂತರ ರೂಪಾಯಿ ವ್ಯಯಿಸಿ ವಿಶೇಷ ಕರೆಯೋಲೆ ತಯಾರಿಸಿದ್ದು ಕೇಳಿದ್ದೇವೆ. ಆದರೆ ಕಳೆದ ವರ್ಷವಷ್ಟೇ ವಿಶೇಷ ಪ್ರಯೋಗವನ್ನು ಬಳ್ಳಾರಿ ಯುವಕನೋರ್ವ ಮಾಡಿದ್ದರು. ಸಾಯಿ ಸಂದೀಪ್ ಎನ್ನುವ ವ್ಯಕ್ತಿಯೋರ್ವ ಬಳ್ಳಾರಿಯಲ್ಲಿರುವ ಬಿಸಿಲಿಗೆ ತಂಪೆರೆಯುವ ಕಲ್ಲಂಗಡಿ ಹಣ್ಣಿನ ಮೇಲೆ ಮದುವೆ ಕರೆಯೋಲೆ ಅಂಟಿಸಿ ಮದುವೆಗೆ ಆಹ್ವಾನಿಸಿದ್ದ. ಇದು ಜನಮೆಚ್ಚುಗೆ ಕೂಡ ಪಡೆದಿತ್ತು. ಹಾಗೆಯೇ ಇತ್ತೀಚೆಗೆ ತುಮಕೂರಿನ ಡಾ. ಅತೀಶ ಮತ್ತು ಡಾ. ರಂಜಿತಾ ಅವರು ತಮ್ಮ ಸರಳವಿವಾಹಕ್ಕೆ ಬಂದವರಿಗೆ ತಾಂಬೂಲದ ಜೊತೆ ದೇಸೀ ಬೀಜದ ಪ್ಯಾಕೆಟ್ ಅನ್ನು ನೀಡಿದ್ದರು.



ಚಿತ್ರ: ವಿನಾಯಕ ಹೆಗಡೆ